ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

17

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ    ದಿನಾಂಕ : DATE : 26/3/2021

# ನನ್ನ ಬಳಿಯೂ ಸಿಡಿಗಳಿವೆ: ಜಾರಕಿಹೊಳಿ

ವಿ.ವಾ, 26/3/21

- ಇಂತಹ 10 ಸಿಡಿ ಬಂದರೂ ಹೆದರುವುದಿಲ್ಲ
- ಸಮಯ ಬಂದಾಗ ಮಹಾ ನಾಯಕನ ಹೆಸರು ಬಹಿರಂಗಗೊಳಿಸುತ್ತೇನೆ
- ಸಿದ್ದರಾಮಯ್ಯ ಅವರ ಮೇಲಿದ್ದ ಗೌರವ ಹೋಯಿತು

ಬೆಂಗಳೂರು: ರಮೇಶ್ ಜಾರಕಿಹೊಳಿ ಅವರ ಸಿಡಿ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ರಾಜಕೀಯದಲ್ಲಿ ಭಾರಿ ಚರ್ಚೆ ನಡೆಯುತ್ತಿದ್ದರೂ, ಮೌನಕ್ಕೆ ಶರಣಾಗಿದ್ದ ಜಾರಕಿಹೊಳಿ ಸೋಮವಾರ ಪ್ರತಿಕ್ರಿಯಿಸಿದ್ದು, 'ಇನ್ನು 10 ಸಿಡಿಗಳು ಬಂದರೂ ಬಗ್ಗುವುದಿಲ್ಲ. ಸಮಯ ಬಂದಾಗ ಮಹಾ ನಾಯಕರ ಹೆಸರನ್ನು ಬಹಿರಂಗಪಡಿಸುತ್ತೇನೆ' ಎಂದು ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ರೀತಿಯ 10 ಸಿಡಿ ಬಂದರು ಹೆದರುವುದಿಲ್ಲ. ನನ್ನ ಬಳಿಯೂ ಬೆಚ್ಚಿ ಬೀಳಿಸುವಂತಹ ದಾಖಲೆಗಳಿವೆ. ಸಮಯ ಬಂದಾಗ ಮಹಾನಾಯಕನ ಹೆಸರನ್ನು ಬಹಿರಂಗಪಡಿಸುತ್ತೇನೆ. ಸದ್ಯ ಪ್ರಕರಣದ ತನಿಖೆ ನಡೆಯುತ್ತಿರುವುದರಿಂದ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ ಎಂದರು.

ಇನ್ನು ಯುವತಿ ಬಿಡುಗಡೆ ಮಾಡಿರುವ ವಿಡಿಯೊಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿ, ವಿಡಿಯೊ ಬಿಡುಗಡೆ ಮಾಡಿರುವ ಯುವತಿ ಯಾರದೋ ಕೈಗೊಂಬೆಯಾಗಿ ವರ್ತಿಸುತ್ತಿದ್ದಾಳೆ. ನಾನು ದೂರು ಕೊಟ್ಟ ಅರ್ಧ ಗಂಟೆಯಲ್ಲಿ ವಿಡಿಯೊ ಬಹಿರಂಗ ಮಾಡಿದ್ದಾರೆ. ನನ್ನ ವಿರುದ್ಧ ಯೋಜಿತವಾದ ಷಡ್ಯಂತ್ರವನ್ನೇ ನಡೆಸಲಾಗುತ್ತಿದೆ. ಇನ್ನು ಈ ರೀತಿ 10 ಸಿಡಿ ಬಂದರೂ ಹೆದರುವುದಿಲ್ಲ ಎಂದರು.

## ಸಿದ್ದರಾಮಯ್ಯರಿಂದ ನಿರೀಕ್ಷೆ ಮಾಡಿರಲಿಲ್ಲ

ಪ್ರತಿಪಕ್ಷನಾಯಕ ಸಿದ್ದರಾಮಯ್ಯ ಅವರ ಬಗ್ಗೆ ನನಗೆ ಗೌರವ ಇತ್ತು. ಆದರೆ, ರಮೇಶ್ ಜಾರಕಿಹೊಳಿ ವಿರುದ್ಧ ಸೆಕ್ಷನ್ 376 ಅಡಿ ಅತ್ಯಾಚಾರದ ದೂರು ದಾಖಲಿಸಬೇಕು ಎಂದು ಅವರು ಹೇಳಿದ ಮೇಲೆ ಅವರ ಮೇಲಿದ್ದ ಗೌರವ ಹೋಯಿತು. ಹೆಚ್ಚು ಮಾತನಾಡಬೇಡಿ ಎಂದು ವಕೀಲರು ಹೇಳಿದ್ದಾರೆ. ಹಾಗಾಗಿ ನಾನು ಎಲ್ಲಾ ವಿಷಯ ಬಹಿರಂಗ ಪಡಿಸುವುದಿಲ್ಲ ಎಂದರು.

**{ರಮೇಶ್ ಜಾರಕಿಹೊಳಿ} ಮಾಜಿ ಸಚಿವ**

ಯುವತಿ ತಮ್ಮ ತಂದೆ-ತಾಯಿಗೆ ರಕ್ಷಣೆ ನೀಡಬೇಕು ಎಂದಿದ್ದಾರೆ. ಈ ಮೂಲಕ ಇದು ವ್ಯವಸ್ಥಿತ ಷಡ್ಯಂತ್ರ ಎಂದು ಮತ್ತೊಮ್ಮೆ ಸಾಬೀತಾಗಿದೆ. ಹೈ ಪ್ರೊಫೈಲ್ ಕೇಸಾಗಿರುವುದರಿಂದ ನಾನು ಹೆಚ್ಚು ಮಾತನಾಡುವುದಿಲ್ಲ.



**ನಾನು ತಪ್ಪು ಮಾಡಿಲ್ಲ:** 10 ದಿನದಿಂದ ಇದೇ ವಿಷಯದ ಬಗ್ಗೆ ಚರ್ಚೆಯಾಗುತ್ತಿದೆ. ನಾನು ತಪ್ಪು ಮಾಡಿಲ್ಲ. ತಪ್ಪು ಮಾಡಿದವರನ್ನು ಜೈಲಿಗೆ ಹಾಕಿಸುವವರೆಗೂ ಬಿಡುವುದಿಲ್ಲ. ದೇವರ ದಯೆಯಿಂದ ನಾನು ನಿರ್ದೋಷಿಯಾಗಿ ಹೊರ ಬರುತ್ತೇನೆ. ಈ ವಿಷಯ ಚರ್ಚೆ ಮಾಡುತ್ತಿರುವವರ ಮೇಲೂ ನಾಳೆ ಸಿಡಿಗಳು ಹೊರ ಬರಬಹುದು ಎಂದು ಹೇಳಿದರು. ಈಗಾಗಲೇ ನಾನು ಕೂಡ ಸಾಕ್ಷಿ ಪುರಾವೆಗಳನ್ನು ಸಂಗ್ರಹಿಸಿದ್ದೇನೆ. ಎಲ್ಲವೂ ನನ್ನ ಜೇಬಿನಲ್ಲೇ ಇವೆ. ಅವನ್ನು ಬಹಿರಂಗ ಪಡಿಸಿದರೆ ಶಾಕ್ ಆಗ್ತೀರಾ. ಮಹಾ ನಾಯಕನ ಹೆಸರನ್ನು ಶೀಘ್ರವೇ ಹೇಳುತ್ತೇನೆ. ನಾನು ನಿರಪರಾಧಿ ಎಂಬುದರಲ್ಲಿ ಎರಡು ಮಾತಿಲ್ಲ ಎಂದರು.